# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು-560 002

ಸಂಖ್ಯೆ:ಆ/ಪಿಎಸ್‌ಆರ್/8682/2012 ದಿನಾಂಕ:20-11-2012

## ಕಛೇರಿ ಆದೇಶ

**ವಿಷಯ: ಪಾಲಿಕೆಯ ಘನತ್ಯಾಜ್ಯ ನಿರ್ವಹಣೆಯ ಕುರಿತು Mobile-e-Governance Android ಸೌಲಭ್ಯವನ್ನು ಹೊಂದಿರುವ Mobile Phone ಗಳಿಂದ Photo (ಛಾಯಾಚಿತ್ರ) ತೆಗೆದು ರವಾನಿಸುವ ಬಗ್ಗೆ.**

**ಉಲ್ಲೇಖ: ಮಾನ್ಯ ಆಯುಕ್ತರವರ ಕಛೇರಿ ಆದೇಶ ಸಂಖ್ಯೆ:BBMP/SYS/PR/26/12-13, ದಿನಾಂಕ:30-10-2012.**

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ ವಲಯಗಳ ಅಪರ/ಜಂಟಿ ಆಯುಕ್ತರುರವರು ಸದರಿಯವರ ವ್ಯಾಪ್ತಿಗೆ ಒಳಪಡುವ ಪ್ರತಿ ವಾರ್ಡಿಗೆ ಘನತ್ಯಾಜ್ಯ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ಈಗಾಗಲೇ ನೇಮಿಸಲಾಗಿದ್ದು, ಘನತ್ಯಾಜ್ಯ ವಿಲೇವಾರಿ ಕಾರ್ಯವು ಸಮರ್ಪಕವಾಗಿ ನಡೆಯಲು ಅನುವಾಗುವಂತೆ ವಾರ್ಡ್ ಮಟ್ಟದಲ್ಲಿ ಘನತ್ಯಾಜ್ಯ ಮೇಲುಸ್ತುವಾರಿಗಾಗಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಅಭಿಯಂತರರು ಹಾಗೂ ಹಿರಿಯ/ಕಿರಿಯ ಆರೋಗ್ಯ ನಿರೀಕ್ಷಕರುಗಳಿಗೆ Android ಸೌಲಭ್ಯವನ್ನು ಒಳಗೊಂಡ ಕನಿಷ್ಠ ತಾಂತ್ರಿಕತೆ ವಿಶಿಷ್ಟ ವಿವರಣೆ ಹೊಂದಿರುವ Mobile Phones ಗಳನ್ನು ಈಗಾಗಲೇ ಉಲ್ಲೇಖದ ಕಛೇರಿ ಆದೇಶದಂತೆ ಒದಗಿಸಲಾಗಿರುತ್ತದೆ.

ಸದರಿ Android ಸೌಲಭ್ಯವನ್ನು ಒಳಗೊಂಡ ಮೊಬೈಲ್‌ಗಳನ್ನು ಉಪಯೋಗಿಸುವ ಬಗ್ಗೆ ಎಲ್ಲಾ ವಲಯದ ಮೇಲ್ಕಂಡ ಅಧಿಕಾರಿ/ಪಾಲಿಕೆಯ ಸಿಬ್ಬಂದಿಗಳಿಗೆ ಈಗಾಗಲೇ ತರಬೇತಿ ನೀಡಲಾಗಿದ್ದು, ಸದರಿಯವರು ಈಗಾಗಲೇ ಒದಗಿಸಿರುವ ಮೊಬೈಲ್‌ನಿಂದ ಪ್ರತಿ ದಿನ ತಪ್ಪದೇ ಪ್ರತಿ ವಾರ್ಡಿನಲ್ಲಿ ಛಾಯಾಚಿತ್ರವನ್ನು ತೆಗೆದು ಮೊಬೈಲ್ ಮೂಲಕ ಅಪ್‌ಲೋಡ್ ಮಾಡಲು ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಲು ಸೂಚಿಸಿದೆ.

1. ಪ್ರತಿ ವಾರ್ಡುಗಳಲ್ಲಿ ತ್ಯಾಜ್ಯ ಸಂಗ್ರಹಣೆ /ಅನಧಿಕೃತ ಕಸ (Black Spots) ಹಾಕುವ ಕನಿಷ್ಠ 10 ಸ್ಥಳಗಳನ್ನು ಗುರುತಿಸಿ, ಸದರಿ ಸ್ಥಳಗಳಲ್ಲಿ Collection Point (CP 1, 2, 3…..9,10) ಎಂಬ ನಾಮಫಲಕಗಳನ್ನು ಹಾಕುವುದು. ಸದರಿ Collection Point ಸಂಕೇತ ಸಂಖ್ಯೆಗಳ ವಿಳಾಸಗಳ ವಿವರಗಳನ್ನು ಕೇಂದ್ರ ಕಛೇರಿಯ ಮಾಹಿತಿ ತಂತ್ರಜ್ಞಾನ ಸಲಹೆಗಾರರ ಕಛೇರಿಗೆ ಅತಿ ಜರೂರಾಗಿ ಸಲ್ಲಿಸುವುದು.
2. ಎಲ್ಲಾ ಛಾಯಾಚಿತ್ರಗಳಲ್ಲಿ Collection Point ಗಳ ನಾಮಪಲಕಗಳನ್ನೊಳಗೊಂಡ ವಿವರಗಳು ಕಡ್ಡಾಯವಾಗಿ ಇರತಕ್ಕದ್ದು.
3. ಬೆಳಿಗ್ಗೆ 7 ಗಂಟೆಯಿಂದ 8 ಗಂಟೆಯೊಳಗೆ ತ್ಯಾಜ್ಯ ಸಂಗ್ರಹಣೆ /ಅನಧಿಕೃತ ಕಸ ಸಂಗ್ರಹವಾಗಿರುವ ಸ್ಥಳಗಳ ಮೊದಲನೇ ಛಾಯಾಚಿತ್ರ
4. ಬೆಳಿಗ್ಗೆ 11 ಗಂಟೆಯಿಂದ 12 ಗಂಟೆಯೊಳಗೆ ತ್ಯಾಜ್ಯವು ತೆರವುಗೊಂಡಿರುವ ಎರಡನೇ ಛಾಯಾಚಿತ್ರ

5. ಸಂಜೆ 4 ಗಂಟೆಯಿಂದ 5 ಗಂಟೆಯೊಳಗೆ ಮೂರನೇ ಛಾಯಾಚಿತ್ರ

**ಹೊಸ ಗುತ್ತಿಗೆದಾರರು ಕೆಲಸವನ್ನು ಪ್ರಾರಂಭಿಸಿದ ನಂತರ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು.**

1. ಗುತ್ತಿಗೆದಾರರು ನೇಮಿಸಿಕೊಂಡಿರುವ ಪೌರಕಾರ್ಮಿಕರ ಹಾಜರಾತಿ ತೆಗೆದುಕೊಳ್ಳುತ್ತಿರುವ ಮಸ್ಟರಿಂಗ್ ಪ್ರಕ್ರಿಯೆಗಳ ಛಾಯಾಚಿತ್ರ,
2. ಗುತ್ತಿಗೆದಾರರು ಕೆಲಸ ನಿರ್ವಹಿಸುವ ಮುನ್ನ ಮತ್ತು ಕೆಲಸದ ನಂತರದ ದ್ವಿತೀಯ ಹಂತದ ತ್ಯಾಜ್ಯ ಸಂಗ್ರಹಣೆ /ಅನಧಿಕೃತ ಕಸ ಹಾಕುವ ಸ್ಥಳಗಳ (Black Spots) ಛಾಯಾಚಿತ್ರ
3. ತ್ಯಾಜ್ಯವನ್ನು ಲಾರಿ ಮತ್ತು ಕಾಂಪ್ಯಾಕ್ಟರ್ ವಾಹನಗಳಿಗೆ ಲೋಡಿಂಗ್ ಹಾಗೂ ಅನ್‌ಲೋಡಿಂಗ್ ಮಾಡುವ ಛಾಯಾಚಿತ್ರ
4. ಏಳು ಗಂಟೆಯ ಅವಧಿಯಲ್ಲಿ ಪ್ರತಿ ಒಂದು ಗಂಟೆಗೆ ಒಂದರಂತೆ ತಮ್ಮ ವಾರ್ಡುಗಳಲ್ಲಿರುವ ಅನಧಿಕೃತ ಕಸವಿರುವ ಹಾಗೂ ಕಸ ತೆರವುಗೊಳಿಸಿರುವ ಸ್ಥಳಗಳ (Black Spots) ದಿನದಲ್ಲಿ ಏಳು ಛಾಯಾಚಿತ್ರ

ವಲಯದ ಮೇಲಾಧಿಕಾರಿಗಳು ಸದರಿ ಕಾರ್ಯವು ಸಮರ್ಪಕವಾಗಿ ನಿರ್ವಹಿಸುತ್ತಿರುವ ಬಗ್ಗೆ ಮೇಲುಸ್ತುವಾರಿ ವಹಿಸುವುದು ಹಾಗೂ ಪ್ರತಿ ನಿತ್ಯ ಈ ಬಗ್ಗೆ ಆಯುಕ್ತರವರ ಕಛೇರಿಗೆ ವರದಿ ಸಲ್ಲಿಸಲು ಸೂಚಿಸಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

- ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರು ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ವಿಶೇಷ ಆಯುಕ್ತರು (ಯೋಜನೆ) ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
- ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.